## Government of Karnataka

## Deposition Sheet (R.P.N.57) Form 4 Criminal

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 880/2024 |

ದಿನಾಂಕ 02-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 2 ಪ್ರಾಸಾಃ 1

| | |
|---|---|
| ಹೆಸರು | ಜಹಿರುದ್ದೀನ್ |
| ತಂದೆಯ ಹೆಸರು | ಮೊಹಮದ್ ಇಸ್ಸಾ |
| ವಯಸ್ಸು | 32 ವರ್ಷ |
| ಉದ್ಯೋಗ | ಆಟೋಚಾಲಕ |
| ವಾಸಸ್ಥಳ | ಶಾಂತಿನಗರ, ದೇವದುರ್ಗ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ**

ಆರೋಪಿ ಪರಿಚಯ ಇಲ್ಲ. ಸಾಕ್ಷಿಯು ಅಕ್ರಮ ಮಟ್ಕಾ ಜೂಜಾಟದ ದಾಳಿ ಮತ್ತು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ:ಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ಸದರಿ ಸಹಿಯನ್ನು ಪೋಲಿಸ ಠಾಣೆಯಲ್ಲಿ ಪೋಲಿಸರು ಕರೆದು ಸಹಿ ಮಾಡು ಎಂದ ಕಾರಣಕ್ಕಾಗಿ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಮಾಡಿರುತ್ತೇನೆ ಗೊತ್ತಿಲ್ಲ. ನಿ ಪಿ 1 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಪೊಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಮತ್ತು ಜಪ್ತಿ ಪಂಚನಾಮೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸ.ಸ.ಅ. ರವರಿಂದ:**

ದಿ: 10-12-2024 ರಂದು ಬೆಳಿಗ್ಗೆ 11-15 ಗಂಟೆ ಸುಮಾರಿಗೆ, ಚಾಸಾ-5 ರವರ ಕರೆಯ ಮೇರೆಗೆ ಪೋಲಿಸ್ ಠಾಣೆಯಲ್ಲಿದ್ದಾಗ, ಚಾಸಾ-1 ರವರಿಗೆ ಮಾಹಿತಿ ಬಂದಿದ್ದೇನೆಂದರೆ ಆರೋಪಿ ದೇವದುರ್ಗ ಪಟ್ಟಣದ ಅಂಬೇಡ್ಕರ್ ಸರ್ಕ್‌ಲ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ 1 ರೂ ಗೆ 80 ರೂ ಕೊಡುತ್ತೇನೆಂದು ಸಾರ್ವಜನಿಕರಿಂದ ಹಣ ಪಡೆದುಕೊಂಡು ಮಟ್ಕಾ ನಂಬರ್ ಬರೆದುಕೊಳ್ಳುತ್ತಿರುವುದಾಗಿ, ದಾಳಿಗೆ ಹೋಗಬೇಕಾಗಿದೆ ಎಂದು ಸಿಬ್ಬಂದಿಗೆ ಹೇಳಿದ್ದರಿಂದ, ಬೆಳಿಗ್ಗ 11-20 ಗಂಟೆ ಸುಮಾರಿಗೆ, ನನ್ನನ್ನು ಮತ್ತು ಚಾಸಾ-3 ರವರನ್ನ ಪಂಚರಾಗಲು ಹಾಜರುಪಡಿಸಿದರು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-3 ರವರು ಪಂಚರಾಗಲು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ನಂತರ ಸಿಬ್ಬಂದಿಗಳ ಜೊತೆಗೆ ಸರಕಾರಿ ಜೀಪ್ ನೇದ್ದರಲ್ಲಿ ಬೆಳಿಗ್ಗೆ 11-20 ಗಂಟೆ ಸುಮಾರಿಗೆ ಠಾಣೆ ಬಿಟ್ಟು ಬೆಳಿಗ್ಗೆ 11-30 ಗಂಟೆ ಸುಮಾರಿಗೆ,ದೇವದುರ್ಗ

ಪಟ್ಟಣದ ಅಂಬೇಡ್ಕರ್ ಸರ್ಕ್‌ಲ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ತಲುಪಿದೆವು ಎಂದರೆ ಸರಿಯಲ್ಲ. ಆರೋಪಿ ಸಾರ್ವಜನಿಕರಿಗೆ 1 ರೂ ಗೆ 80 ರೂ ಕೊಡುತ್ತೇನೆಂದು ಕೂಗಾಡುತ್ತಾ ಸಾರ್ವಜನಕರಿಂದ ಮಟ್ಕಾ ಚೀಟಿ ಬರೆದುಕೊಳ್ಳುವುದನ್ನು ಖಚಿತಪಡಿಸಿಕೊಂಡು ಬೆಳಿಗ್ಗೆ 11-35 ಗಂಟೆಗೆ ದಾಳಿ ಮಾಡಲಾಗಿ ಆರೋಪಿ ಸಿಕ್ಕಿಬಿದ್ದಿದ್ದು ಆತನ ಅಂಗ ಶೋಧನೆ ಮಾಡಿದಾಗ, ಆತನ ಬಳಿ ನಗದು ಹಣ 2000/- ರೂ ಒಂದು ಬಾಲ್ ಪೆನ್ ಮತ್ತು ಒಂದು ಮಟ್ಕಾ ಚೀಟಿ ಮತ್ತು ಒಂದು ವಿ ವೋ ಮೋಬೈಲ್ ಫೋನ್ ಸಿಕ್ಕಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಹೆಸರು ವಿಳಾಸ ಕೇಳಲಾಗಿ, ಮೌನೇಶ ತಂದೆ ರಾಮಣ್ಣ ಸಾ: ದೇವದುರ್ಗ, ವಯಸ್ಸು: 35 ವರ್ಷ ಸಾ: ದೇವದುರ್ಗ ಅಂತಾ ತಿಳಿಸಿದನು ಎಂದರೆ ಸರಿಯಲ್ಲ. ಚಾಸಾ-1 ರವರು ಮಟ್ಕಾ ಚೀಟಿಯನ್ನು ಯಾರಿಗಾದರೂ ಕೊಡುತ್ತೀಯಾ ಅಥವಾ ನೀನೆ ತೆಗೆದುಕೊಳ್ಳುತ್ತೀಯೋ ಎಂದು ಕೇಳಿದಾಗ, 1 ಮತ್ತು 2ನೇ ಆರೋಪಿತರು 3ನೇ ಆರೋಪಿಗೆ ಕೊಡುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಮುದ್ದೆಮಾಲನ್ನು ಒಂದು ಕವರನಲ್ಲಿ ಹಾಕಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆಯನ್ನು ಬೆಳಿಗ್ಗೆ 11-35 ರಿಂದ ಮಧ್ಯಾಹ್ನ 12-35 ಗಂಟೆಯವರೆಗೆ ಬರೆದು ಪಂಚರಾದ ನಾವು ಸಹಿಯನ್ನು ಮಾಡಿದೆವು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-
ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

**Government of Karnataka**
**Deposition Sheet (R.P.N.57) Form 4 Criminal**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 368/2024 |

ದಿನಾಂಕ 27-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 3 ಪ್ರಾಸಾಃ 2

| | |
|---|---|
| ಹೆಸರು | ಹೀರಾಸಿಂಗ್ |
| ತಂದೆಯ ಹೆಸರು | ಗುಲಾಬಸಿಂಗ್ |
| ವಯಸ್ಸು | 40 ವರ್ಷ |
| ಉದ್ಯೋಗ | ಆಟೋಚಾಲಕ |
| ವಾಸಸ್ಥಳ | ಶಾಂತಿನಗರ ದೇವದುರ್ಗ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ**

ಆರೋಪಿ ಪರಿಚಯ ಇಲ್ಲ. ಸಾಕ್ಷಿಯು ಅಕ್ರಮ ಮಟ್ಕಾ ಜೂಜಾಟದ ದಾಳಿ ಮತ್ತು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ:ಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ಸದರಿ ಸಹಿಯನ್ನು ಪೋಲಿಸ ಠಾಣೆಯಲ್ಲಿ ಪೋಲಿಸರು ಕರೆದು ಸಹಿ ಮಾಡು ಎಂದ ಕಾರಣಕ್ಕಾಗಿ ಸಹಿ ಮಾಡಿರುತ್ತೇನೆ. ನಿ ಪಿ 1 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಪೊಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಮತ್ತು ಜಪ್ತಿ ಪಂಚನಾಮೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸ.ಸ.ಅ. ರವರಿಂದ:**

ದಿ: 26-11-2024 ರಂದು ಮಧ್ಯಾಹ್ನ 02-10 ಗಂಟೆ ಸುಮಾರಿಗೆ, ಚಾಸಾ-4 ರವರ ಕರೆಯ ಮೇರೆಗೆ ಪೋಲಿಸ್ ಠಾಣೆಯಲ್ಲಿದ್ದಾಗ, ಚಾಸಾ-1 ರವರಿಗೆ ಮಾಹಿತಿ ಬಂದಿದ್ದೇನೆಂದರೆ ಆರೋಪಿ ದೇವದುರ್ಗ ಪಟ್ಟಣದ ಶಿರವಾರ ಕ್ರಾಸ್ ಹತ್ತಿರ ಪುಣೆ ಗ್ಯಾರೇಜ್ ಎದುರುಗಡೆ ಸಾರ್ವಜನಿಕ ಸ್ಥಳದಲ್ಲಿ 1 ರೂ ಗೆ 80 ರೂ ಕೊಡುತ್ತೇನೆಂದು ಸಾರ್ವಜನಿಕರಿಂದ ಹಣ ಪಡೆದುಕೊಂಡು ಮಟ್ಕಾ ನಂಬರ್ ಬರೆದುಕೊಳ್ಳುತ್ತಿರುವುದಾಗಿ, ದಾಳಿಗೆ ಹೋಗಬೇಕಾಗಿದೆ ಎಂದು ಸಿಬ್ಬಂದಿಗೆ ಹೇಳಿದ್ದರಿಂದ, ಮಧ್ಯಾಹ್ನ 02-10 ಗಂಟೆ ಸುಮಾರಿಗೆ, ಪಂಚರನ್ನು ಹಾಜರುಪಡಿಸಿದರು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-2 ರವರು ಪಂಚರಾಗಲು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ನಂತರ ಸಿಬ್ಬಂದಿಗಳ ಜೊತೆಗೆ ಸರಕಾರಿ ಜೀಪ್ ನಂಬರ್ ಕೆ ಎ 36, ಜಿ 0935 ನೇದ್ದರಲ್ಲಿ ಮಧ್ಯಾಹ್ನ 02-15 ಗಂಟೆ ಸುಮಾರಿಗೆ ಠಾಣೆ ಬಿಟ್ಟು ಮಧ್ಯಾಹ್ನ 02-25 ಗಂಟೆ ಸುಮಾರಿಗೆ,ದೇವದುರ್ಗ ಪಟ್ಟಣದ ಶಿರವಾರ ಕ್ರಾಸ್ ಹತ್ತಿರ ಪುಣೆ ಗ್ಯಾರೇಜ್ ಎದುರುಗಡೆ ಸಾರ್ವಜನಿಕ ಸ್ಥಳದಲ್ಲಿ ತಲುಪಿದೆವು ಎಂದರೆ

ಸರಿಯಲ್ಲ. ಆರೋಪಿ ಸಾರ್ವಜನಿಕರಿಗೆ 1 ರೂ ಗೆ 80 ರೂ ಕೊಡುತ್ತೇನೆಂದು ಕೂಗಾಡುತ್ತಾ ಸಾರ್ವಜನಕರಿಂದ ಮಟ್ಕಾ ಚೀಟಿ ಬರೆದುಕೊಳ್ಳುವುದನ್ನು ಖಚಿತಪಡಿಸಿಕೊಂಡು ಮಧ್ಯಾಹ್ನ 02-30 ಗಂಟೆಗೆ ದಾಳಿ ಮಾಡಲಾಗಿ ಆರೋಪಿ ಸಿಕ್ಕಿಬಿದ್ದಿದ್ದು ಆತನ ಅಂಗ ಶೋಧನೆ ಮಾಡಿದಾಗ, ಆತನ ಬಳಿ ನಗದು ಹಣ 1600/- ರೂ ಒಂದು ಬಾಲ್ ಪೆನ್ ಮತ್ತು ಒಂದು ಮಟ್ಕಾ ಚೀಟಿ ಸಿಕ್ಕಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಹೆಸರು ವಿಳಾಸ ಕೇಳಲಾಗಿ, ಭೀಮಶೆಯ್ಯ ತಂದೆ ಹನುಮಂತ, ವಯಸ್ಸು: 31 ವರ್ಷ ಸಾ: ಕೊತ್ತದೊಡ್ಡಿ ಅಂತಾ ತಿಳಿಸಿದನು ಎಂದರೆ ಸರಿಯಲ್ಲ. ಚಾಸಾ-1 ರವರು ಮಟ್ಕಾ ಚೀಟಿಯನ್ನು ಯಾರಿಗಾದರೂ ಕೊಡುತ್ತೀಯಾ ಅಥವಾ ನೀನೆ ತೆಗೆದುಕೊಳ್ಳುತ್ತೀಯೋ ಎಂದು ಕೇಳಿದಾಗ, ಆರೋಪಿ ನಾನೆ ಇಟ್ಟುಕೊಳ್ಳುತ್ತೇನೆಂದು ತಿಳಿಸಿದನು ಎಂದರೆ ಸರಿಯಲ್ಲ. ಮುದ್ದೆಮಾಲನ್ನು ಒಂದು ಕವರನಲ್ಲಿ ಹಾಕಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 02-30 ರಿಂದ 03-30 ಗಂಟೆಯವರೆಗೆ ಬರೆದು ಪಂಚರಾದ ನಾವು ಸಹಿಯನ್ನು ಮಾಡಿದೆವು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ